ಶೈತ್ಯಾಗಾರ ಮಂಳಿಗೆಗಳನ್ನು ತೆರೆಯುವ ಬಗ್ಗೆ

೧೧೬೩. ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಕೃಷಿ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಬ್ಬಿ ನಗರ ಮತ್ತು ಇದರ ಸುತ್ತ ಬಹಳಷ್ಟು ಜನರು ಕಾಯಿ ಪಲ್ಯದ ಬೆಳೆಗಳನ್ನು ಬೆಳೆಯುತ್ತಿದ್ದು ಬೆಳೆಬಂದಾಗ ನಷ್ಟದಲ್ಲಿ ತರಕಾರಿಗಳನ್ನು ಮಾರಾಟ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ.

ಆ) ಮೇಲೆ ಹೇಳಿದ ತರಕಾರಿ ಬೆಳೆಗಳನ್ನು ನಷ್ಟದ ಬೆಲೆಗೆ ಮಾರುವುದನ್ನು ತಪ್ಪಿಸಲು ಶೈತ್ಯಾಗಾರ ಮಳಿಗೆಗಳನ್ನು ಮಾಡಿಕೊಡಬೇಕೆಂದು ಬಹು ದಿನಗಳಿಂದ ಬೆಳೆಗಾರರು ಕೇಳಿಕೊಳ್ಳುತ್ತಿರುವುದು ನಿಜವೆ ಹಾಗಿದ್ದಲ್ಲಿ ಶೈತ್ಯಾಗಾರ ಮಳಿಗೆಗಳನ್ನು ಎಷ್ಟು ದಿವಸಗಳಲ್ಲಿ ಕಟ್ಟಿಸಿ ಕೊಡಲಾಗುವುದು ?

ಶ್ರೀ ಬಸವರಾಜ ಪಾಟೀಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—

ಅ) ಇಲ್ಲ.

ಆ) ಪರಿಶೀಲನೆಯಲ್ಲಿದೆ.

ಗುಬ್ಬಿ ನಗರಕ್ಕೆ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡದ ಬಗ್ಗೆ

೧೧೬೪. ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಬ್ಬಿ ನಗರಕ್ಕೆ ಪ್ರಥಮ ದರ್ಜೆ ಕಾಲೇಜನ್ನು ಮಂಜೂರುಮಾಡಿ ಪ್ರಾರಂಭಮಾಡಿದ್ದು ಯಾವಾಗ ? ಸದರಿ ಕಾಲೇಜಿನ ಕಟ್ಟಡ ವಿದ್ಯಾರ್ಥಿಗಳ ಸಂಖ್ಯೆಗೆ ಸಾಕಾಗದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಕಟ್ಟಡ ಒದಗಿಸಲು ಸರ್ಕಾರದವರು ಯಾವ ಕ್ರಮ ತೆಗೆದುಕೊಳ್ಳುವರು ಹಾಗೂ ಯಾವ ಸಾಲಿನಲ್ಲಿ ನಿರ್ಮಿಸಲಾಗುವುದು ?

ಇ) ಸದರಿ ಕಾಲೇಜಿನಲ್ಲಿ ಯಾವ ಯಾವ ವಿಷಯಕ್ಕೆ ಮಂಜೂರುಮಾಡಿರುತ್ತದೆ. ಹಾಗೂ ಮಂಜೂರು ಮಾಡಿರುವ ವಿಷಯಗಳ ಭೋದನೆಮಾಡಲು ಉಪನ್ಯಾಸಕರು ಇದ್ದಾರೆಯೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ೧೯-೮-೧೯೬೩ರಲ್ಲಿ ಪ್ರಾರಂಭವಾಯಿತು ಬಂದಿದೆ.

ಆ) ಕಾಲೇಜು ಕಟ್ಟಡ ನಿರ್ದೇಶನಕ್ಕೆ ಭೂಸ್ವಾಧೀನದ ಬಗ್ಗೆ ಕಂದಾಯ ಇಲಾಖೆಯವರನು ಕೋರಿದೆ ನಿವೇಶನ ದೊರೆತ ಕೂಡಲೇ ಸೂಕ್ತ ಕ್ರಮ ಕೈಕೊಳ್ಳಲು ಪರಿಶೀಲಿಸಲಾಗುವುದು.

ಇ) (ಆರ್ಟ್ಸ್) ಕಲಾ ವಿಭಾಗ ಮಾತ್ರ ಇದ್ದು ಇದಕ್ಕೆ ಉಪನ್ಯಾಸಕರು ಇದ್ದಾರೆ.

ಮಧುಗಿರಿ ತಾಲ್ಲೂಕು ಗಿರೇಗೌಡನಹಳ್ಳಿ ಗ್ರಾಮಕ್ಕೆ ಕೆರೆ ಮಂಜೂರು ಮಾಡುವ ವಿಚಾರ

೧೧೬೫. ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೬೩-೬೪ನೆ ಸಾಲಿನ ಆಂದಾಜಿನ ಪಟ್ಟಿಯಲ್ಲಿ ನಮೂದಿಸಿರುವ ದೊಡ್ಡೇರಿ ಹೋಬಳಿ ಗಿರೇಗೌಡನಹಳ್ಳಿ ಕೆರೆಯನ್ನು ಪ್ರಾರಂಭಿಸಲು ತಡವಾದುದಕ್ಕೆ ಕಾರಣವೇನು ಹಾಗೂ ಇದನ್ನು ಯಾವಾಗ ಪ್ರಾರಂಭಿಸಲಾಗುವುದು ?